ದಿನಾಂಕ 22-2-1993ರ ಚುಕ್ಕೆ ಗುರುತಿನ ಹಾಗೂ ಚುಕ್ಕೆರಹಿತ ಪ್ರಶ್ನೋತ್ತರಗಳು

ಸವಣೂರ ಮತ್ತು ಶಿಗ್ಗಾಂ ತಾಲ್ಲೂಕುಗಳ ರಸ್ತೆಗಳ ದುರಸ್ತಿ

64 (581) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈ ಬಾರಿಯ ನೆರೆಹಾವಳಿಯಿಂದಾಗಿ ಧಾರವಾಡ ಜಿಲ್ಲಾ ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳ ಲೋಕೋಪಯೋಗಿ ಮತ್ತು ಜಿಲ್ಲಾ ಪರಿಷತ್ತಿಗೆ ಸೇರಿದ ರಸ್ತೆಗಳು ತುಂಬಾ ದುಸ್ಥಿತಿಯಲ್ಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳ ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪರಿಷತ್ ವತಿಯಿಂದ ಯೋಜನೆ ನಕ್ಷೆ ಹಾಗೂ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಎಷ್ಟು ಹಣ ಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ ಮತ್ತು ದುರಸ್ತಿ ಕೆಲಸ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ಈ) ರಾಜ್ಯದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಗಳ ದುರಸ್ತಿಗಾಗಿ ಸ್ಥೂಲವಾದ ಅಂದಾಜು ಸರ್ಕಾರದಲ್ಲಿ ಸ್ವೀಕೃತವಾಗಿದೆ. ಯೋಜನಾ ನಕ್ಷೆಯನ್ನು ಮಾಡಿರುವುದಿಲ್ಲ.

ಇ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ ಹಾನಿಗೀಡಾದ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿಗೆ 180.00 ಲಕ್ಷ ರೂ.ಗಳ ಸ್ಥೂಲವಾದ ಅಂದಾಜು ಮಾಡಲಾಗಿದೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಹಾನಿಗೀಡಾದ ರಸ್ತೆಗಳ ದುರಸ್ತಿಗೆ 388.00 ಲಕ್ಷ ರೂ.ಗಳ ಸ್ಥೂಲವಾದ ಅಂದಾಜು ಮಾಡಲಾಗಿದೆ.

ಈ) ಚಂಡಮಾರುತಗಳ ದೆಸೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿಗೆ ಅತಿವೃಷ್ಟಿ ಪರಿಹಾರ ನಿಧಿಯಿಂದ ಕಂದಾಯ ಇಲಾಖೆಯು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

ಜಿಲ್ಲೆ	ಅನುದಾನ (ಲಕ್ಷ. ರೂಗಳಲ್ಲಿ)
ಚಿತ್ರದುರ್ಗ	35.00
ಶಿವಮೊಗ್ಗ	25.00
ಚಿಕ್ಕಮಗಳೂರು	20.00
ದಕ್ಷಿಣ ಕನ್ನಡ	10.00
ಮೈಸೂರು	15.00
ಧಾರವಾಡ	45.00

ಕರ್ನಾಟಕ ರಾಜ್ಯ ಪತ್ರಾಗಾರ,101
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಪ್ರಸ್ತಾವನೆ ಸಂಖ್ಯೆ 639 ದಿನಾಂಕ 21.2.93

ಬಳ್ಳಾರಿ	55.00
ರಾಯಚೂರು	45.00
ಒಟ್ಟು	250.00

ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಒಡ್ಡುಗಳ ನಿರ್ಮಾಣ

68 (796) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೊಲ್ಲಿತೋಡು ಗ್ರಾಮದಲ್ಲಿ ಸಾವಿರಾರು ಎಕರೆ ಗದ್ದೆ ವ್ಯವಸಾಯವಾಗದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಹಿಂದೆ ಈ ಬಗ್ಗೆ ಒಡ್ಡು ತೆಗೆಸಲು ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಮತ್ತು ಆ ಪೈಕಿ ಎಷ್ಟು ಹಣ ವೆಚ್ಚವಾಯಿತು ಮತ್ತು ಆಯವ್ಯಯದಲ್ಲಿ ಒದಗಿಸಿದ್ದ ಹಣವೆಷ್ಟು ?

ಡಾ।। ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಗೊತ್ತಿದೆ

ಆ) ಈ ಸ್ಥಳದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಕೈಗೊಳ್ಳಲು ರೂ. 49.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, 93-94ನೇ ಸಾಲಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

1991-92ನೇ ಸಾಲಿನ ಆಯವ್ಯಯದಲ್ಲಿ 0.50 ಲಕ್ಷ ರೂ.ಗಳನ್ನು ಮತ್ತು 1992-93ನೇ ಸಾಲಿನಲ್ಲಿ ರೂ. 12.00 ಲಕ್ಷಗಳನ್ನು ಒದಗಿಸಲಾಗಿದ್ದು ಈ ಪೈಕಿ ಯಾವುದೇ ಹಣ ವೆಚ್ಚ ಮಾಡಿರುವುದಿಲ್ಲ.

ಸುರ್ಗಿತೋಪು ಏತ ನೀರಾವರಿ ಯೋಜನೆ

71 (828) ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):-

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುರ್ಗಿತೋಪು 'ಏತ ನೀರಾವರಿ' (ಮಳವಳ್ಳಿ ತಾಲ್ಲೂಕು) ಯೋಜನೆ ಕೆಲಸ ಈಗ ಯಾವ ಹಂತದಲ್ಲಿದೆ, ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು;

ಆ) ಇಷ್ಟು ಮಂದಗತಿಯಲ್ಲಿ ನಡೆಯಲು ಕಾರಣವೇನು, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ವಿಲ್ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿವೆ. ಈವರೆಗೆ 29.50 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಪಂಪ್ ಹೌಸ್, ಶಾಲೆಗಳು, ನೌಕರರ ವಸತಿಗೃಹಗಳು ಮತ್ತು ತೊಟ್ಟಿಗಳು